ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.2827/2021

ಸಿ .ಡಬ್ಲ್ಯೂ :3

ಪಿ .ಡಬ್ಲ್ಯೂ :3

ಸಾಕ್ಷಿಯನ್ನು ದಿಃ 15-01-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಪ್ರಸ್ತುತ ಕಡಬದಲ್ಲಿ ವಾಸವಿದ್ದೇನೆ . ತುಮಕೂರಿನಲ್ಲಿರುವ ವಿನ್ ಫಿನಿತ್ ಕಂಪನಿಯ ಶಾಖೆಯಲ್ಲಿ ಫೀಲ್ಡ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ . ಮೋದಿ ಕೇರ್ ಸರಕುಗಳನ್ನು ಸಹಾ ಮಾರಾಟ ಮಾಡುತ್ತಿದ್ದೇನೆ . ಮೇಲೆ ಹೇಳಿದಂತೆ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಪೊಲೀಸರಿಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ , ಮತ್ತು ನ್ಯಾಯಾಲಯಕ್ಕೂ ಸಹಾ ಯಾವುದೇ ದಾಖಲೆಗಳನ್ನು ನೀಡಿಲ್ಲ . ಎಷ್ಟು ಗಂಟೆಗೆ ಕೆಲಸಕ್ಕೆ ಹೋಗಿ ಬರುತ್ತೀರಿ ಎಂದರೆ ಸಾಕ್ಷಿಯು ಫೀಲ್ಡ್ ವರ್ಕ್ ಇರುವ ಕಾರಣ ನಿಗದಿತ ಸಮಯವಿಲ್ಲ, ಅವಶ್ಯಕತೆ ಇದ್ದಾಗ ಹೋಗುತ್ತಿದ್ದೆ ಎಂದು ಉತ್ತರಿಸಿದ್ದಾರೆ .

ಚಾಸಾ -1 ರವರು ಸುಮಾರು 7-8 ವರ್ಷಗಳಿಂದ ಪರಿಚಿತರು . ಚಾಸಾ -1 ರವರು ಹೇಗೆ ಪರಿಚಯ ಎಂದರೆ ಸುಮಾರು 6 ವರ್ಷಗಳ ಹಿಂದೆ ನಾನು ಗುಬ್ಬಿಯ ಗಂಟೆ ಲೇಔಟ್ ನಲ್ಲಿ ವಾಸಿಸುತ್ತಿದ್ದೆ , ಚಾಸಾ -1 ರವರು ಟೈಲರ್ ಕೆಲಸ ಮಾಡುತ್ತಿದ್ದರು ಆ ಮೂಲಕ ಪರಿಚಯ ಎಂದು ತಿಳಿಸಿದ್ದಾರೆ . ಚಾಸಾ -1 ರವರು ಗುಬ್ಬಿಯಲ್ಲಿ ಐಶ್ವರ್ಯ ಫ್ಯಾಶನ್ ಎಂಬ ಹೆಸರಿನ ಅಂಗಡಿ ಇಟ್ಟುಕೊಂಡಿದ್ದಾರೆ, ಅದರಲ್ಲಿ ಹೆಣ್ಣು ಮಕ್ಕಳ ಬಟ್ಟೆಗಳನ್ನು ಮಾರಾಟ ಮಾಡುತ್ತಾರೆ . 1 ನೇ ಆರೋಪಿತರು ಯಾವ ಗ್ರಾಮದವರು ಮತ್ತು ಯಾವ ಜಾತಿಯವರು ಎಂದರೆ ಸಾಕ್ಷಿಯು ಅವರ ಜಾತಿಯ ಬಗ್ಗೆ ಮಾಹಿತಿ ಇಲ್ಲ ,ಅವರು ಚಾಸಾ -1 ರವರ ಗಂಡ ಎಂದು ತಿಳಿದಿದೆ , ಅವರು ಕಾರೇಹಳ್ಳಿ ಗ್ರಾಮದಲ್ಲಿ ವಾಸಿಸುತ್ತಾರೆ ಎಂದು ತಿಳಿಸಿದ್ದಾರೆ . 1 ನೇ ಆರೋಪಿತರು ಪ್ರಸ್ತುತ ತುಮಕೂರಿನಲ್ಲಿ ವಾಸಿಸುತ್ತಿದ್ದಾರೆ, ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ . ನಾನು ತುಮಕೂರಿನಲ್ಲಿರುವ 1 ನೇ ಆರೋಪಿತರ ಮನೆಗೆ ಎಂದೂ ಹೋಗಿಲ್ಲ . ಎಷ್ಟು ವರ್ಷಗಳಿಂದ 1 ನೇ ಆರೋಪಿತರು ಪರಿಚಯ ಎಂದರೆ ಮೇಲೆ ಹೇಳಿದಂತೆ ಗಲಾಟೆ ನಡೆಯುವ ಹಿಂದಿನ 1 ವರ್ಷದಿಂದಲೂ ಪರಿಚಯ ಎಂದು ತಿಳಿಸಿದ್ದಾರೆ .

ಕಾರೇಹಳ್ಳಿಯ ತೋಟವು ಆನಂದ್ ಪ್ರಸಾದ್ ರವರ ಹೆಸರಿನಲ್ಲಿದೆ . ಆ ಸಂಬಂಧ ನಾನು ದಾಖಲೆ ನೋಡಿಲ್ಲ . ಸದರಿ ತೋಟ ರಾಜೇಶ್ ರವರ ಹೆಸರಿನಲ್ಲಿದೆ ಅದು ಅವರ ತಾಯಿ ಗಂಗಮ್ಮನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ .

ಚಾಸಾ -1 ಮತ್ತು 1 ನೇ ಆ ರೋಪಿತರ ವಿವಾಹ ಎಲ್ಲಿ ಮತ್ತು ಯಾವಾಗ ನಡೆದಿತ್ತು ಎಂದು ನನಗೆ ಗೊತ್ತಿಲ್ಲ . ಕಾರೇಹಳ್ಳಿ ತೋಟದ ಸರ್ವೆ ನಂಬರ್ ಗೊತ್ತಿಲ್ಲ. ಕಾರೇಹಳ್ಳಿ ತೋಟಕ್ಕೆ ಬರಬೇಕೆಂದು 1 ನೇ ಆರೋಪಿತರು ಕರೆದಿಲ್ಲ , ಚಾಸಾ -1 ರವರು ಕರೆದಿದ್ದರು . ಅನುಮತಿ ಇಲ್ಲದೆ 1 ನೇ ಅರೋಪಿತರ ತೋಟಕ್ಕೆ ಹೇಗೆ ಹೋಗಿದ್ದಿರಿ ಎಂದರೆ ಚಾಸಾ -1 ರವರು ಕರೆದಿದ್ದರಿಂದ ಹೋಗಿದ್ದೆ ಎಂದು ತಿಳಿಸಿದ್ದಾರೆ . ಚಾಸಾ -1 ರವರು 1 ನೇ ಆರೋಪಿತರನ್ನು ವಿವಾಹವಾಗಿಲ್ಲ . ಚಾಸಾ -2 ಮತ್ತು ಹೇಮಾ ರವರು ಅವರಿಬ್ಬರ ಮಕ್ಕಳಲ್ಲ , ಚಾಸಾ -1 ರವರು ನನ್ನ ಸ್ನೇಹಿತೆಯಾಗಿರುವ ಕಾರಣ ಅವರಿಗೆ ಅನುಕೂಲವಾಗಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆಯವರ ಸ್ವತ್ತಿಗೆ ಅನುಮತಿ ಇಲ್ಲದೆ ಹೋಗಿ ವಿಡಿಯೋ ಚಿತ್ರೀಕರಣ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಉದ್ದೇಶಪೂರ್ವಕವಾಗಿ ನಾನು ಚಿತ್ರೀಕರಣ ಮಾಡಿಲ್ಲ, 3 ನೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಲು ಬಂದರು ಮತ್ತು ಮೊಬೈಲ್ ಕಿತ್ತುಕೊಳ್ಳಲು ಪ್ರಯತ್ನಿಸಿದರು ಆ ಸಮಯ ವಿಡಿಯೋ ಚಿತ್ರೀಕರಣ ಆಗಿರುತ್ತದೆ ಎಂದು ಹೇಳಿದ್ದಾರೆ . ವಿಡಿಯೋ ಚಿತ್ರೀಕರಿಸಲು ಮೊಬೈಲ್ ನ್ನು ಉಪಯೋಗಿಸದೆ ಇದ್ದ ಹೊರತು ಅದಾಗಿಯೇ ವಿಡಿಯೋ ಚಿತ್ರೀಕರಣ ಆಗುವುದಿಲ್ಲ ವೆಂದರೆ ಸಾಕ್ಷಿಯು ನಾನು ನನ್ನ ಮೊಬೈಲ್ ನಲ್ಲಿ ಸಂಗ್ರಹಿಸಿದ್ದ ಹಳೆಯ ವೀಡಿಯೋಗಳನ್ನು ನೋಡುತ್ತಿದ್ದೆ , 3 ನೇ ಆರೋಪಿತರು ಮೊಬೈಲ್ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ನನಗೆ ತಿಳಿಯದಂತೆ ವಿಡಿಯೋ ಚಿತ್ರೀಕರಣ ಆಗಿದೆ ಎಂದು ತಿಳಿಸಿದ್ದಾರೆ . ನನ್ನ ಮೊಬೈಲ್ ಯಾವ ಕಂಪನಿಯೆದ್ದು ಮತ್ತು ಯಾವ ಮಾಡೆಲ್ ಎಂದು ನನಗೆ ಗೊತ್ತಿಲ್ಲ . ಪೊಲೀಸರು ನನ್ನಿಂದ ಮೊಬೈಲ್ ನ್ನು ಜಪ್ತು ಪಡಿಸಿಕೊಂಡಿಲ್ಲ . ನಾನು ನನ್ನ ಟಿ ವಿ ಎಸ್ ಜುಪಿಟರ್ ದ್ವಿ ಚಕ್ರ ವಾಹನದಲ್ಲಿ ತೋಟದ ಬಳಿ ಹೋಗಿದ್ದೆ , ಅದರ ನೋಂದಣಿ ಸಂಖ್ಯೆ ಗೊತ್ತಿಲ್ಲ . ಪೊಲೀಸರಿಗೆ ಹೇಳಿಕೆ ನೀಡುವಾಗ ಜುಪಿಟರ್ ವಾಹನದಲ್ಲಿ ಹೋಗಿದ್ದೆ ಎಂದು ತಿಳಿಸಿದ್ದೇನೆ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ಮಹಿಳೆ ನಾನಾಗಿದ್ದೇನೆ ಅದರಲ್ಲಿ ನಿಂತಿರುವ ವ್ಯಕ್ತಿ ಯಾರೆಂದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ . (ಚರ್ಚೆಯ ಅನುಕೂಲತೆಗಾಗಿ ಭಾವ ಚಿತ್ರವನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ ). ಸಾಕ್ಷಿಗೆ ಪ್ರಾಸಾ-2 ರವರಿಗೆ ಆಗಲೇ ತೋರಿಸಿದ್ದ ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ನಿಂತಿರುವ ವ್ಯಕ್ತಿ ಯಾರೆಂದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ .

ನಾನು ಮತ್ತು ಚಾಸಾ -1 ಮತ್ತು 2 ರವರು ಈಗ ತೋರಿಸಿದ ಛಾಯ ಚಿತ್ರಗಳಲ್ಲಿ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿ 3 ನೇ ಆರೋಪಿತರಿಗೆ ಸೇರಿದ ಅಡಿಕೆ ತೋಟದಲ್ಲಿ ಕಳ್ಳತನದಿಂದ ಅಡಿಕೆಯನ್ನು ಕೀಳಿಸುತ್ತಿದ್ದೆವು, 4 ಮತ್ತು 5 ನೇ ಆರೋಪಿತರು ಅದನ್ನು ಪ್ರಶ್ನಿಸಲಾಗಿ ನಾವೇ ಅವರುಗಳ ವಿರುದ್ದ ಗಲಾಟೆ ಮತ್ತು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ . ನನಗಾಗಲೀ ಚಾಸಾ -1 ಮತ್ತು 2 ರವರಿಗಾಗಲೀ ಸದರಿ ತೋಟದ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರೂ ಸಹಾ ತೋಟಕ್ಕೆ ಅಕ್ರಮ ಪ್ರವೇಶ ಮಾಡಿ ಅಡಿಕೆಯನ್ನು ಕೀಳಿಸಿದ್ದೇವೆ ಎಂದರೆ ಸರಿಯಲ್ಲ. ಆ ಸಂಬಂಧ ಆರೋಪಿತರುಗಳು ಠಾಣೆಗೆ ದೂರು ನೀಡಲು ಹೋಗಿದ್ದರು , ನಾನು ದೂರು ದಾಖಲಿಸದಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ -1 ಮತ್ತು 2 ರವರು ಬೇರೆಯವರಿಗೆ ಸೇರಿದ ಸ್ಕೂಟಿ ಒಂದರಲ್ಲಿ ತೋಟದ ಬಳಿ ಬಂದಿದ್ದರು , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರುಗಳು ದ್ವಿ ಚಕ್ರ ವಾಹನದ ಕೀ ಗಳನ್ನು ಕಿತ್ತುಕೊಂಡಿಲ್ಲ , ಚಕ್ರಗಳ ಗಾಳಿ ತೆಗೆದಿಲ್ಲ , ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಹಲ್ಲೆ ಮಾಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿತರಿಗೆ ಪಾರ್ಶ್ವವಾಯುವಾಗಿದೆ ಎಂದರೆ ನನಗೆ ಗೊತ್ತಿಲ್ಲ . ಅವರು ಮಾತನಾಡಲು ತೊದಲುತ್ತಾರೆ ಎಂದರೆ ಸರಿ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . ಯಾವ ದಿನಾಂಕದಂದು ಹೇಳಿಕೆ ನೀಡಿದ್ದೇನೆ ಎಂದು ಹೇಳಲು ನಿಖರವಾಗಿ ನೆನಪಾಗುತ್ತಿಲ್ಲ . ಚಾಸಾ -1 ರವರು 1 ನೇ ಆರೋಪಿತರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನನ್ನೊಡನೆ ಸೇರಿ ಜೀವನಾಂಶಕ್ಕಾಗಿ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದಾರೆ ಮತ್ತು ಸುಳ್ಳು ವಿವರಗಳಿಂದ ದೂರನ್ನು ನೀಡಿ ಈ ಪ್ರಕರಣ ದಾಖಲಿಸುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ .

ಪೊಲೀಸರಿ ಗೆ ಎಷ್ಟು ಸಿ ಡಿ ಗಳನ್ನು ನೀಡಿದ್ದೀರಿ , ಯಾವ ಕಂಪನಿಯದ್ದು ಎಂದರೆ ಸಾಕ್ಷಿಯು ಎರಡು ಸಿ ಡಿ ಗಳನ್ನು ನೀಡಿದ್ದೇನೆ , ಯಾವ ಕಂಪನಿಯ ಸಿ ಡಿಗಳು ಎಂದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ಗುಬ್ಬಿಯ ಸ್ಟುಡಿಯೋ ಒಂದರಲ್ಲಿ ಸಿ ಡಿ ಗಳನ್ನು ಬರ್ನ್ ಮಾಡಿಸಲಾಗಿದೆ . ಚಾಸಾ -1 ರವರಿಗೆ ಸಹಾಯವಾಗಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಯಾವುದೇ ಮಹಜರಿಗೆ ಸಾಕ್ಷಿಯಾಗಿ ಸಹಿ ಮಾಡಿಲ್ಲ .

ನಾನು ಸಮಾಜ ಸೇವಕಿ ಯಾಗಿದ್ದೇನೆ . ಗುಬ್ಬಿಯ ನ್ಯಾಯಾಲಯಗಳಲ್ಲಿ ಸುಮಾರು 2-3 ಪ್ರಕರಣಗಳಲ್ಲಿ ಸಾಕ್ಷಿಯಾಗಿ ಹಾಜರಾಗಿದ್ದೇನೆ . ನಾನು ಉದ್ದೇಶಪೂರ್ವಕವಾಗಿ ಚಾಸಾ -1 ರವರ ಮೂಲಕ ಸುಳ್ಳು ವಿವರಗಳ ಪ್ರಕರಣ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.